ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ರಾಜರಾಜೇಶ್ವರಿ ನಗರ ವಲಯ,

ನಂ:ಕಾ.ಪಾ.ಅ(ಯೋ)/ರಾರಾನವ/ಆ.ಮ/21/2018-19

ಕಾರ್ಯಪಾಲಕ ಅಭಿಯಂತರರು(ಯೋ)ರವರ ಕಛೇರಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ರಾಜರಾಜೇಶ್ವರಿ ನಗರ ವಲಯ, ಬೆಂಗಳೂರು.
ದಿನಾಂಕ:- 02.03.2019

ಆಡಳಿತಾತ್ಮಕ ಮಂಜೂರಾತಿ ಆದೇಶ ಪ್ರತಿ

ಸಹಾಯಕ ಕಾರ್ಯಪಾಲಕ ಅಭಿಯಂತರರು (ಯೋಜನೆ) ವಿಭಾಗ, ರಾಜರಾಜೇಶ್ವರಿನಗರ ವಲಯ ರವರು ಈ ಕೆಳಗಿನ ಕಾಮಗಾರಿಗೆ 2016-17ನೇ ಸಾಲಿನ ಲೋಕೋಪಯೋಗಿ ಇಲಾಖೆ ಬೆಂಗಳೂರು ವೃತ್ತದ ದರ ಪಟ್ಟಿಯ ಮತ್ತು ಮಂಜೂರಾದ ದರಗಳ ಆಧಾರದ ಮೇಲೆ ರೂ.750.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ ಆಡಳಿತಾತ್ಮಕ ಮಂಜೂರಾತಿಗಾಗಿ ಮಂಡಿಸಿರುತ್ತಾರೆ.

ಈ ಕಾಮಗಾರಿಯ ಅಂದಾಜು ಮೊತ್ತವನ್ನು 750.00 ಲಕ್ಷ ರೂಗಳಿಗೆ ಮಾನ್ಯ ಆಯುಕ್ತರು ರವರ ಆಧಿಕಾರ ಪ್ರತ್ಯಾಯೋಜನೆ ಆದೇಶ ಸಂ:ಬಿ12(1)ಪಿಆರ್/394/2018-19ರ, ದಿನಾಂಕ:04-10-2018ರ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆ ನಡವಳಿಗಳಂತೆ ಕಾಮಗಾರಿಯ ಅಂದಾಜು ಮೊತ್ತಕ್ಕೆ ದಿನಾಂಕ:27.02.2019 ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ವಿಷಯ ಸಂಖ್ಯೆ:264/2018-19 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿರುವ ಮೇರೆಗೆ ಆಡಳಿತಾತ್ಮಕ ಅನುಮೋದನೆ ಆದೇಶ ಪ್ರತಿ ಹೊರಡಿಸಿದೆ.

ವಿಷಯ:- Construction Building at Peenya Village Govt.Primary School and Health Centre NH4 in ward No.38

ಅಂದಾಜು ಮೊತ್ತ ರೂ **750.00** ಲಕ್ಷಗಳು. ಜಾಬ್ ಸಂಖ್ಯೆ: **038-19-000001**

ಆಡಳಿತಾತ್ಮಕ ಮಂಜೂರಾತಿ ಪುಸ್ತಕದ ಪುಟ ಸಂಖ್ಯೆ: 12 ರ ಕ್ರಮ ಸಂಖ್ಯೆ:21 ರಲ್ಲಿ ದಾಖಲಿಸಿದೆ.

ಷರತ್ತುಗಳು:-

1) ದರಪಟ್ಟಿ ಆಧಾರಿತವಲ್ಲದ ಅಂಶಗಳಿಗೆ ಡೆವಾ ದರವನ್ನು ತಯಾರಿಸಿ ಅನುಮೋದನೆ ಪಡೆಯುವುದು.
2) ಅಂದಾಜು ಪಟ್ಟಿಯಲ್ಲಿ ಮಾರುಕಟ್ಟೆ ದರ ಅಳವಡಿಸಿಕೊಂಡಿರುವ ಅಂಶಗಳಿಗೆ ಕೊಟೇಶನ್ ಕರೆದು ಅನುಮೊದನೆ ಪಡೆಯುವುದು.
3) ಕೆಲಸದ ಸ್ಥಳದಿಂದ ಸಾಗಣೆ ದೂರಕ್ಕೆ ಅನುಮೋದನೆ ಪಡೆಯುವುದು.
4) ಮೇಲಿನ ಕೆಲಸದ ವೆಚ್ಚವನ್ನು ಅನುದಾನದಡಿಯಲ್ಲಿ ಭರಿಸುವುದು.
5) ವಿನ್ಯಾಸಗಳನ್ನು ಸಂಬಂಧಪಟ್ಟ ಮೇಲಾಧಿಕಾರಿಗಳಿಂದ ಅನುಮೋದಿಸಿಕೊಂಡು ಕಾರ್ಯಗತಗೊಳಿಸುವುದು.

ಕಾರ್ಯಪಾಲಕ ಅಭಿಯಂತರರು(ಯೋ)
ರಾಜರಾಜೇಶ್ವರಿ ನಗರ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಮಾಹಿತಿಗಾಗಿ ಸಲ್ಲಿಸಿದೆ:

1. ಮುಖ್ಯ ಅಭಿಯಂತರರು, ರಾ.ರಾ.ನ. ವಲಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಮಾಹಿತಿಗಾಗಿ.
2. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಬೆಂಗಳೂರು. ರವರ ಮಾಹಿತಿಗಾಗಿ.
3. ಸಹಾಯಕ ನಿಯಂತ್ರಕರು(ಹಣಕಾಸು) ರಾ.ರಾ.ನ. ವಲಯ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಮಾಹಿತಿಗಾಗಿ.
4. ಕಡತ ಪ್ರತಿ.